**ಸಿ ಸಿ ನಂ. 1375/2021**

**ಪಿಡಬ್ಲ್ಯೂ - 1 ಎಂ ಎಂ ಪೆಮ್ಮಯ್ಯ**

**ದಿನಾಂಕ 15-02-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಶ್ರೀ. ಬಿ ಎಸ್ ಪಿ ಆರೋಪಿ ಪರ ವಕೀಲರಿಂದಃ**

ಆರೋಪಿಗೆ ಸಾಲ ನೀಡುವ ಒಂದು ಅಥವಾ ಎರಡು ದಿನದ ಹಿಂದೆ ಆತ ಬಂದು ಸಾಲದ ಅರ್ಜಿ ನೀಡಿರುತ್ತಾರೆ. ಛಾಪಾ ಕಾಗದವನ್ನು ಸಾಲಗಾರರನೇ ತರಬೇಕು. ಒಂದು ಲಕ್ಷ ಸಾಲ ನೀಡಬೇಕಾದಲ್ಲಿ ಸಾಲಗಾರರು 200 ರೂಪಾಯಿಯ ಛಾಪಾ ಕಾಗದ ತರಬೇಕಾಗುತ್ತದೆ. ಈ ಪ್ರಕರಣದ ಸಾಲವನ್ನು ಪಡೆಯುವ ಹಿಂದೆ ಆರೋಪಿಯು ನಮ್ಮ ಬ್ಯಾಂಕ್ ನಲ್ಲಿ 2018 ನೇ ಇಸವಿಯಲ್ಲಿ ಇನ್ನೊಂದ ಸಾಲ ಪಡೆದಿದ್ದರು. ಅದನ್ನು ಅವರು ಒಪ್ಪಿಕೊಂಡಂತೆ ಕಟ್ಟಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ಮೂಲ ದಾಖಲೆಯ ನಕಲು ಪ್ರತಿಗಳು ಎಂದರೆ ಸರಿ. ಆರೋಪಿಯು ನೀಡಿದ್ದರೂ ಎಂದು ಹೇಳಲಾದ ಸಾಲದ ಅರ್ಜಿಯಲ್ಲಿರುವ ಸಹಿ ಜಾಮೀನುದಾರರ ಸಹಿಯಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಸಾಲದ ಅರ್ಜಿ ಮೂಲ ಸಾಲದ ಅರ್ಜಿಯನ್ನು ತಿದ್ದುಪಡಿ ಮಾಡಿ, ನಂತರ ಅದರ ಜೆರಾಕ್ಸ್ ತೆಗೆದ ಪ್ರತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂಲ ಪ್ರತಿಯನ್ನು ಹಾಜರುಪಡಿಸಬೇಕಾದಲ್ಲಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ.

ಸದರಿ ಸಾಲದ ಅರ್ಜಿಯಲ್ಲಿರುವ ಜಾಮೀನುದಾರರ ಸಹಿಯನ್ನು ಬೆರಳಚ್ಚು ತಜ್ಞರ ಪರೀಕ್ಷೆಗೆ ಕಳುಹಿಸಲು ಯಾವುದೇ ನನ್ನ ಅಭ್ಯಂತರವಿರುವುದಿಲ್ಲ. ಪಿಗ್ಮಿ ಸಾಲವನ್ನು ಸಾಲ ಪಡೆದ ಒಂದು ವರ್ಷದಲ್ಲಿ ತೀರಿಸುವ ಷರತ್ತು ಇರುತ್ತದೆ. ಆ ರೀತಿ ಒಂದು ವರ್ಷದಲ್ಲಿ ಮರುಪಾವತಿಸದೇ ಇದ್ದಲ್ಲಿ ನಾವು ಅವರ ಮೇಲೆ ಕಾನೂನು ಕ್ರಮ ಜರುಗಿಸುತ್ತೇವೆ ಎಂದರೆ ಸರಿ. ಆರೋಪಿ ಈ ಪ್ರಕರಣದಲ್ಲಿ ಒಪ್ಪಿಕೊಂಡಂತೆ ಸಾಲ ಪಡೆದ ಒಂದು ವರ್ಷದಲ್ಲಿ ಸದರಿ ಸಾಲವನ್ನು ಪೂರ್ತಿ ಮರುಪಾವತಿ ಮಾಡಿರುವುದಿಲ್ಲ. ನಾವು ಆರೋಪಿಗೆ ಆ ರೀತಿ ಸಾಲದ ಹಣ ಮರುಪಾವತಿಸದೇ ಇದ್ದಾಗ ಬ್ಯಾಂಕ್‌ನಿಂದ ನೋಟಿಸನ್ನು ನೀಡಿರುತ್ತೇವೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿ ಯಾವ ದಿನಾಂಕದಂದು

ನಿಪಿ2 ಚೆಕ್ ನ್ನು ನೀಡಿರುತ್ತಾನೆಂದು ಈಗ ನೆನಪಿರುವುದಿಲ್ಲ. ಸಾಕ್ಷಿ ಮುಂದುವರೆದು ಸಾಲದ ಹಣದ ವಸೂಲಿಗೆ ಹೋದ ಸಮಯದಲ್ಲಿ ಆತ ಅದನ್ನು ನೀಡಿರುತ್ತಾನೆ ಎಂದು ನುಡಿಯುತ್ತಾರೆ.

ನಾವು ಸಾಲ ವಸೂಲಾತಿಗಾಗಿ ಹೋಗಿ ಬಂದ ಬಗ್ಗೆ ಲೆಡ್ಜರ್ ನಲ್ಲಿ ನಮೂದು ಮಾಡುವುದಿಲ್ಲ. ಆರೋಪಿ ನಿಪಿ2 ಚೆಕ್ ನ್ನು ನೀಡುವ ಸಮಯದಲ್ಲಿ ನಾನು ಪಿರ್ಯಾದಿ ಬ್ಯಾಂಕ್ ನ ಶಾಖೆಯಲ್ಲಿ ಇದ್ದಿರಲಿಲ್ಲ. ನಾನು ಪಿರ್ಯಾದಿನಲ್ಲಿ ತಿಳಿಸಿದ ದಿನಾಂಕದಂದು ಆರೋಪಿ ನಮ್ಮ ಬ್ಯಾಂಕ್ ನಲ್ಲಿ ಯಾವುದೇ ಸಾಲ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ಆರೋಪಿ ದಿನಾಂಕ 31-08-2019 ರಂದು ಪಡೆದುಕೊಂಡಿದ್ದರು ಎಂದು ಹೇಳಲಾದ ಸಾಲಕ್ಕೆ ಸಂಬಂಧಿಸಿದ ದಾಖಲೆಗಳಲ್ಲ ಎಂದರೆ ಸರಿಯಲ್ಲ. ನಿಪಿ2 ಚೆಕ್ ಆರೋಪಿ ದಿನಾಂಕ 31-08-2019 ರಂದು ಪಡೆದುಕೊಂಡಿದ್ದರು ಎಂದು ಹೇಳಲಾದ ಸಾಲದ ಮರು ಪಾವತಿಗೆ ನೀಡಿದ ಚೆಕ್ ಅಲ್ಲ ಎಂದರೆ ಸರಿಯಲ್ಲ. ಆರೋಪಿಯು 2018 ನೇ ಇಸವಿಯಲ್ಲಿ ಪಡೆದುಕೊಂಡ ಸಾಲದ ಸಮಯದಲ್ಲಿ ಭದ್ರತೆಗಾಗಿ ನೀಡಿದ ನಿಪಿ1 ಸಹಿ ಮಾಡಿದ ಖಾಲಿ ಚೆಕ್ ನ್ನು ದುರ್ಬಳಕೆ ಮಾಡಿಕೊಂಡು ಆತನ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಿಪಿ2 ರಲ್ಲಿರುವ ತಿಳಿಸಿರುವ ಹಣವನ್ನು ನೀಡಲು ಬಾಧಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-

(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ